# ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ

**ಸಿಸಿ ನಂ.18/2021**

**ಚಾಸಾ-1/ಪಿಡಬ್ಲೂ-1**

| | |
|---|---|
| **ಹೆಸರು** | ಸೂಗುರೇಶ |
| **ತಂದೆ ಹೆಸರು** | ಸಿದ್ರಾಮಪ್ಪ |
| **ವಯಸ್ಸು** | 32 ವರ್ಷಗಳು |
| **ಉದ್ಯೋಗ** | ಅಬಕಾರಿ ಉಪ ನಿರೀಕ್ಷಕರು |
| **ವಾಸ ಸ್ಥಳ** | ಬೆಂಗಳೂರು |

**ದಿನಾಂಕ 06-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 26-06-2019 ರಿಂದ 14-02-2021 ರವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ ಜೇವರ್ಗಿ ಅಬಕಾರಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 19-03-2020 ರಂದು ಮದ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಾನು ಕಛೇರಿಯಲ್ಲಿ ಇದ್ದಾಗ ಅಂಕಲಗಾ ತಾಂಡದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂತು. ಆದ್ದರಿಂದ ನಾನು ಮತ್ತು ನಮ್ಮ ಚಾಲಕ ಖಲೀಲ್ ರವರು ಕಛೇರಿಯಿಂದ ಹೊರಟು ಮಾರ್ಗ ಮದ್ಯದಲ್ಲಿ ನಮ್ಮ ಸಿಬ್ಬಂದಿಯಾದ ಚಾಸಾ-2 ಮತ್ತು 3 ರವರಿಗೆ ಫೋನ ಮೂಲಕ ಕರೆಮಾಡಿ ಸ್ಥಳಕ್ಕೆ ಬರುವಂತೆ ತಿಳಿಸಿದರು. ನಂತರ ನಾವು ಅಂಕಲಗಾ ತಾಂಡಕ್ಕೆ ಹೋಗಿ ದೇವಸ್ಥಾನದ ಬಳಿಯಿದ್ದ ಸಾರ್ವಜನಿಕರನ್ನು ಪಂಚರಾಗಿ ಬರುವಂತೆ ಕೋರಲಾಗಿ ಯಾರು ಸಹ ಸಹಕಾರ ಮಾಡಿರುವುದಿಲ್ಲ. ನಮ್ಮ ಸಿಬ್ಬಂದಿಯನ್ನು ಪಂಚರನ್ನಾಗಿ ಮಾಡಿಕೊಂಡು ಸ್ಥಳಕ್ಕೆ ಹೋಗುತ್ತಿದ್ದಾಗ ಒಂದು ಮನೆಯಿಂದ ಒಬ್ಬ ಮಹಿಳೆ ಓಡಿ ಹೋದಳು. ನಂತರ ನಾವು ಸ್ಥಳದಲ್ಲಿ ಶೋಧನಾ ಪತ್ರ ತಯಾರು ಮಾಡಿಕೊಂಡು ಮನೆಯನ್ನು ಶೋಧಿಸಲಾಗಿ. ಸದರಿ ಮನೆಯ ಬಾಗಿಲು ತೆರೆದಿತ್ತು. ಸದರಿ ಮನೆಯಲ್ಲಿ ಒಂದು ಬಳಿ ಚೀಲದಲ್ಲಿ ಅದರಲ್ಲಿ 90 ಎಮ್.ಎಲ್.ನ 96 ಓರಿಜಿನಲ್ ಚಾಯ್ಸ ಪೌಚಗಳಿದ್ದವು, 180 ಎಮ್.ಎಲ್.ನ 09 ಐಬಿ ಬಾಟಲಗಳು, ಕೆಲವು ಕಿಂಗ್ ಫಿಶರ್ ಬೀರ ಕ್ಯಾನಗಳು ಇದ್ದವು. ಸ್ಥಳದಲ್ಲಿದ್ದ ಜನರನ್ನು ವಿಚಾರಿಸಲಾಗಿ ಸದರಿ ಮನೆಯ ಗಂಗುಬಾಯಿ ಗಂಡ ಮಾದು ಚವಾಣ ಎಂದು ಗೊತ್ತಾಯಿತು. ಅವುಗಳ ಪೈಕಿ ಎರಡು ಓಸಿ ಪೌಚಗಳು, ಒಂದು ಐಬಿ ಬಾಟಲ ಹಾಗೂ ಎರಡು ಕಿಂಗ್ ಫಿಶರ್ ಕ್ಯಾನಗಳು ರಾಸಾಯನಿಕ ಪರೀಕ್ಷೆಗಾಗಿ ಸ್ಯಾಂಪಲಾಗಿ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ ಸಿಲ್ ಮಾಡಲಾಯಿತು.

ನಂತರ ಪಂಚರ ಸಮಕ್ಷಮ 03–20 ರಿಂದ 04–00 ರವರೆಗೆ ಜಪ್ತಿ ಪಂಚನಾಮೆಯನ್ನು ಜರುಗಿಸಲಾಯಿತು. ನಂತರ ಕಛೇರಿಗೆ ಬಂದು ಪ್ರಕರಣ ದಾಖಲು ಮಾಡಲಾಯಿತು.

ಈಗ ನಾನು ಶೋಧನಾ ವಾರಂಟನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೇಯನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ನಿಪಿ–2 ಎಂದು, ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ದೂರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಎಫ್.ಐ.ಆರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಎಫ್.ಐ.ಆರ್ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ–4 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.

ಈಗ ನ್ಯಾಯಾಲಯದ ಮುಂದೆ ಇರುವ ಎರಡು ಓಸಿ ಪೌಚಗಳು, ಒಂದು ಐಬಿ ಬಾಟಲ ಹಾಗೂ ಎರಡು ಕಿಂಗ್ ಫಿಶರ್ ಕ್ಯಾನಗಳು ನೋಡುತ್ತಿದ್ದು ಆ ದಿನ ಸದರಿಯವುಗಳನ್ನು ವಶಪಡಿಸಿಕೊಂಡ ಮದ್ಯದಿಂದ ಸ್ಯಾಂಪಲಗಾಗಿ ತೆಗೆಯಲಾಗಿತ್ತು. ಸದರಿ ಯವುಗಳನ್ನು ಮುದ್ದೆಮಾಲು 1 ರಿಂದ 5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.</u>

ನಮಗೆ ಪೋನ ಮೂಖಾಂತರ ಬಾತ್ಮಿ ಬಂದಿರುತ್ತದೆ. ನಮಗೆ ಬಾತ್ಮಿ ಬಂದಕ ವಿಚಾರವನ್ನು ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ದಿನಚರಿಯ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾವು ಕಛೇರಿ ಬಿಟ್ಟಾಗ ಮಧ್ಯಹ್ನ 01–15 ನಿಮಿಷ ಆಗಿತ್ತು. ನಮ್ಮ ಕಛೇರಿ ಜೇವರ್ಗಿ ಪಟ್ಟಣದಲ್ಲಿ ಇದೆ ಎಂದರೆ ನಿಜ. ನಮ್ಮ ಕಛೇರಿಯಿಂದ ಸದರಿ ಗ್ರಾಮಕ್ಕೆ ಹೋಗುವ ಮದ್ಯ ನ್ಯಾಯಾಲಯ ಇದೆ ಎಂದರೆ ನಿಜ. ನ್ಯಾಯಾಲಯದಿಂದ ದಾಳಿ ಮಾಡಲು ಅನುಮತಿ ಪಡೆದುಕೊಳ್ಳಬಹುದಾಗಿತ್ತು ಎಂದರೆ ನಿಜ. ನಾವು ಅಂಕಲಗಾ ಗ್ರಾಮಕ್ಕೆ ಹೋದಾಗ ಸುಮಾರು ಮಾಧ್ಯಹ್ನ 02–45 ರಿಂದ 02–50 ಆಗಿತ್ತು. ಪಂಚನಾಮೆಯನ್ನು ನಾನೇ ಬರೆದಿದ್ದೇನೆ. ಪಂಚನಾಮೆಗೆ ಪಂಚರಾಗಲು ಸಾರ್ವಜನಿಕರು ಸಹಕರಿಸಲಿಲ್ಲ ಎಂಬ ವಿಚಾರವನ್ನು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ನಿಜ. ನಿಪಿ–2 ಪಂಚನಾಮೆಯಲ್ಲಿ ಸಾರ್ವಜನಿಕರು ಪಂಚರಾಗಿರುವ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸಾಕ್ಷಿಯು ನಾನು ಮೊದಲು ಬಾರಿಗೆ ಪಂಚನಾಮೆ ಬರೆದಿದ್ದರಿಂದ ಆ ರೀತಿ ತಪ್ಪಾಗಿರುತ್ತದೆ ಎಂದು ಹೇಳುತ್ತಾರೆ. ಇಟಗಾ–ಗಾಣಗಾಪುರ ಮುಖ್ಯ ರಸ್ತೆಯಲ್ಲಿ ಒಂದು ದೇವಸ್ಥಾನ ಇದೆ ಎಂದರೆ

ನಿಜ. ಆರೋಪಿಯ ಮನೆ ಸದರಿ ಮುಖ್ಯ ರಸ್ತೆಗೆ ಲಗತ್ತಾಗಿದೆ ಎಂದರೆ ನಿಜ. ಆರೋಪಿಯು ಹೋಟಲ ನಡೆಸುತ್ತಾರೆ ಎಂದರೆ ಸರಿಯಲ. ಆದ್ದರಿಂದ ಸಾರ್ವಜನಿಕರು ಚಹಾ ಕುಡಿಯಲು ಬರುತ್ತಾರೆ ಎಂದರೆ ಸರಿಯಲ್ಲ. ಅವರ ಮನೆಯ ಅಕ್ಕ ಪಕ್ಕದಲ್ಲಿ ಮನೆಗಳು ಇವೆ ಎಂದರೆ ಸರಿಯಲ್ಲ. ಸದರಿ ಮನೆಯ ಒಂದು ಭಾಗದಲ್ಲಿ ಮಾತ್ರ ಮನೆ ಇರುತ್ತದೆ. ಘಟನಾ ಸ್ಥಳದ ಪೋಟೋವನ್ನು ನಾನು ತೆಗೆಸಿರುವುದಿಲ್ಲ. ನಮ್ಮ ಜೊತೆ ಮಹಿಳಾ ಸಿಬ್ಬಂದಿ ಇಲ್ಲದೇ ಇರುವುದರಿಂದ ಆರೋಪಿಯನ್ನು ನಾವು ಹಿಡಿಯಲು ಪ್ರಯತ್ನಿಸಿಲ್ಲ. ಸಾಕ್ಷಿಯು ಮುಂದು ವರೆದು ಆರೋಪಿ ಮನೆಗಳ ಮರೆಯಲ್ಲಿ ಓಡಿ ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

ಮದ್ಯವನ್ನು ಬಿಳಿಯ ಅಕ್ಕಿ ಚೀಲದಲ್ಲಿ ಇಡಲಾಗಿತ್ತು. ಸದರಿ ಚೀಲದ ಮೇಲೆ ಯಾವುದೇ ಅಕ್ಷರಗಳು ಬರೆದಿರಲಿಲ್ಲ. ಸದರಿ ಚೀಲವನ್ನು ನಾವು ಜಪ್ತಿ ಪಡೆಸಿಕೊಂಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಸುಮಾರು 4–5 ಜನ ಗ್ರಾಮಸ್ಥರು ಬಂದಿದ್ದರು. ಸದರಿ ಮನೆಯಲ್ಲಿ ಮದ್ಯ ಸಿಕ್ಕಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಎರಡು ಕೋಣೆಗಳು ಇದ್ದವು. ಮದ್ಯ ಬೇರೆ ಕಡೆ ಸಿಗುತ್ತವೆ ಎಂದರೆ ನಿಜ. ಪಂಚನಾಮೆಯಲ್ಲಿ ಶಾಂಪಲ್ ನ ಶೀಲ್ ನ ಸಂಖ್ಯೆ ಯನ್ನು ನಮೂದಿಸಿಲ್ಲ ಎಂದರೆ ನಿಜ. ನಾವು ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಕೊಸ್ಕರ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಯನ್ನು ಪಂಚರನ್ನಾಗಿ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಮನೆಯಲ್ಲಿ ಯಾರು ಇಲ್ಲದೇ ಇದ್ದ ಕಾರಣ ನಾವು ಮನೆಯವರಿಗೆ ನೋಟಿಸು ಕೋಡಲಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿಗು ಈ ಪ್ರಕರಣಕ್ಕು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ